# 15. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಜ್ಯೋತಿ ನಗರ

**ಶಾಲೆಯ ಪರಿಚಯ :**

ಮಕ್ಕಳು ಮನುಕುಲದ ಆಶಾ ಕುಸುಮಗಳು ಅದು ಆರದಂತೆ ಬಾಡದಂತೆ, ಬಳಲದಂತೆ ರಕ್ಷಿಸಬೇಕಾದದು ಪ್ರತಿಯೊಬ್ಬ ಪೋಷಕರ, ಶಿಕ್ಷಕರ ಹಾಗೂ ಸಮಾಜದ ಹೊಣೆಗಾರಿಕೆ ಈ ನಿಟ್ಟಿನಡಿಯಲ್ಲಿ 21–02–2001 ರಂದು ಜ್ಯೋತಿ ನಗರ ಎಂಬ ಪುಟ್ಟ ಹಳ್ಳಿಯಲ್ಲಿ ಸರ್ಕಾರಿ ಶಾಲೆಯೊಂದು ಉದಯಿಸಿತು. ಜ್ಯೋತಿ ಎಂಬ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಈ ಊರಿನ ಪ್ರಗತಿಯ ಬಗ್ಗೆ ಹಲವಾರು ಆಶಾಗೋಪುರಗಳನ್ನು ಕಟ್ಟಿದ್ದರಂತೆ, ಆದರೆ ಅದು ನೆರವೇರುವ ಮೊದಲೇ ಅಕಾಲ ಮೃತ್ಯುವಿಗೆ ಜ್ಯೋತಿ ಎಂಬ ಜ್ಞಾನಜ್ಯೂತಿ ಹಾರಿ ಹೋಯಿತು. ಅವರ ನೆನಪಿಗಾಗಿ ಈ ಊರನ್ನು ಜ್ಯೋತಿ ನಗರ ಎಂದು ಕರೆಯಲಾಯಿತು ಎಂದು ಹಿರಿಯರು ಹೇಳಿದ ನಿದರ್ಶನಗಳಿವೆ.

**ಹೊಸ ಕಟ್ಟಡ ಪ್ರಾರಂಭವಾಗುವುದಕ್ಕಿಂತ ಮುಂಚೆ ಶಾಲೆ ಕಾರ್ಯ ನಿರ್ವಹಿಸುತ್ತಿದ್ದ ಕಟ್ಟಡದ ನೋಟ**



ಸರ್ಕಾರಿ ಕಟ್ಟಡ ನಿರ್ಮಾಣ ವಾಗುವ ವರೆಗೂ ಶ್ರೀಮತಿ ಶಾಂತಮ್ಮ, ಶ್ರೀಯುತ ಶಿವರಾಂ ಹಾಗೂ ಶ್ರೀಯುತ ಹಾಲಪ್ಪ ಇವರುಗಳ ಮನೆಯಲ್ಲಿಯೇ ಶಾಲೆಯನ್ನು ನಡೆಸಲಾಗುತ್ತಿತ್ತು ಆಗ ಬಹಳಷ್ಟು ಸಮಸ್ಯೆಗಳನ್ನು ಎದುರಿಸಬಾಕಾಯಿತು ಆದರೆ ಅಂತಹ ಸಮಸ್ಯೆಗಳಿಗೆ ಸೆಡ್ಡು ಹೊಡೆದು ಸುಸಜ್ಜಿತವಾದ ಹಾಗೂ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸರ್ಕಾರಿ ಕಟ್ಟಡ ನಿರ್ಮಾಣಗೊಂಡು ಗುಣಾತ್ಮಕ ಶಿಕ್ಷಣ ನೀಡುತ್ತಿದ್ದಾರೆ ಎಂದರೆ ಅದು ಶಿಕ್ಷಕರ ಆತ್ಮಸ್ಥೈರ್ಯ ಹಾಗೂ ಧೃಡ ನಿರ್ಧಾರ, ವೃತ್ತಿ ಗೌರವವೇ ಮೂಲಕಾರಣ ಎಂದು ಹೇಳಿದರೆ ತಪ್ಪಾಗಲಾರದು. ನೂತನ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತದ್ದಂತೆ "ನಲಿ–ಕಲಿ" ಎಂಬ ವಿನೂತನ ಯೋಜನೆ ರಾಜ್ಯದಲ್ಲಿ ಮೊಟ್ಟಮೊದಲಬಾರಿಗೆ ಅನುಷ್ಠಾನಗೊಂಡ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಶೋಭ ಅವರು ಮೊದಲ ಬಾರಿಗೆ ನಲಿ ಕಲಿ ತರಬೇತಿಯನ್ನು ತಮಿಳುನಾಡಿನಲ್ಲಿ ಪಡೆದು ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಗಳಾಗಿ ತಮ್ಮ ತರಬೇತಿ ಸಾರವನ್ನು ತರಗತಿ ಕೋಣೆಯಲ್ಲಿ ಪ್ರತಿ ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ಗುಣಾತ್ಮಕ ಕಲಿಕೆಗೆ ಕಾರಣವಾಗಿದ್ದಾರೆ. ಈ ಭೋಧನಾ ಪದ್ದತಿಯಿಂದ ಮಕ್ಕಳಲ್ಲಿ ಸಂತಸದ ಕಲಿಕೆ, ಸ್ವ ವೇಗದ ಕಲಿಕೆ, ಸ್ವ ಕಲಿಕೆ ಈ ಅಂಶವು ಶಾಲೆಯಲ್ಲಿ ಮೂರ್ತರೂಪ ಪಡೆದುಕೊಂಡಿತು. ಕನಿಷ್ಠ ಕಲಿಕಾ ಮಟ್ಟ ಆಧಾರಿತ ಸಾಮರ್ಥ್ಯಗಳನ್ನು , ಚಟುವಟಿಕೆ ಆಧಾರಿತವಾಗಿ ಅಳವಡಿಕೆ ಮಾಡಿಕೊಳ್ಳಲಾಗಿದೆ ಆದರೆ ನಿರೀಕ್ಷಿತ ಮಟ್ಟದ ಪಾಠೋಪಕರಣಗಳ ತಯಾರಿಕೆ ಹಾಗೂ ಬಳಕೆ, ನಿರ್ವಹಣೆ ಕಷ್ಟ ಸಾಧ್ಯವಾಯಿತು. ಮುಂಬರುವ ದಿನಗಳಲ್ಲಿ ಶಿಕ್ಷಕರ ಎಡಬಿಡದ ಪರಿಶ್ರಮದಿಂದ ಎಲ್ಲವೂ ಸಾದ್ಯವಾಯಿತು, ಈಗ ಈ ಶಾಲೆಯೊಂದು ಮಾದರಿಶಾಲೆಯಾಗಿ ರೂಪುಗೊಳ್ಳಲು ಶಿಕ್ಷಕರ ಪರಿಶ್ರಮ ಅಗಾಧವಾಗಿ ಮೂಡಿ ಬರಲು ಹಲವಾರು ನಿದರ್ಶನ ಹಾಗೂ ಛಾಯ ಚಿತ್ರಗಳೊಂದಿಗೆ ಅನಾವರಣಗೊಳಿಸಬಹುದಾಗಿದೆ.



ಸರ್ವಶಿಕ್ಷಾ ಅಭಿಯಾನ ಯೋಜನೆಯಡಿ ನೂತನ ಶಾಲಾ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸುತ್ತಿರುವ ಅಂದಿನ ಮುಖ್ಯ ಶಿಕ್ಷಕಿ ಶ್ರೀಮತಿ ಶೋಭ ವೈ

ಶಾಲೆಯ ಪ್ರಸ್ತುತ ಸ್ಥಿತಿ




01–06–2011 ರಿಂದ ನೂತನವಾಗಿ ಶಾಲೆಗೆ ವರ್ಗಾವಣೆಗೊಂಡು ಬಂದನ ನಂತರ ಶ್ರೀ ಮಾರಪ್ಪ ಸಿ ಇವರ ಕಾರ್ಯ ವೈಖರಿ.



ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀಯುತ ಮಂಜುನಾಥ್ ರವರಿಂದ ನೂತನ ರ್‍ಯಾಂಪ್ಸ್ ಉದ್ಘಾಟನೆ

## ಶಾಲಾ ಸರ್ವತೋಮುಖ ಬೆಳವಣಿಗೆಗೆ ಕಾರಣವಾದ ಪ್ರಮುಖ ಅಂಶಗಳು:

1. ಮಕ್ಕಳು ಮತ್ತು ಶಿಕ್ಷಕರಲ್ಲಿ ಸಮಯ ಪ್ರಜ್ಞೆ ಮೂಡಿಸುವುದು.
2. ಶಾಲಾ ಅವಧಿಯನ್ನು ಸಂಪೂರ್ಣ ಕಲಿಕಾ ಪ್ರಕ್ರಿಯೆಗೆ ತೊಡಗಿಸಿಕೊಂಡಿರುವುದು.
3. ಸಂಪನಲಗಳ ಕ್ರೋಢೀಕರಣ (ಪಾಠೋಪಕರಣಗಳು)
4. ಇಂಗ್ಲೀಷ್ ಕಲಿಕೆಗೆ ಹೆಚ್ಚಿ ಒತ್ತು (ಪೋಷಕರ ಆಶಯದಂತೆ)
5. ದಾಖಲಾತಿ ಹೆಚ್ಚಳಕ್ಕೆ ಸತತ ಪ್ರಯತ್ನ
6. ವಿವಿಧ ಮಹಿಳಾ ಸಂಘ ಹಾಗೂ ಯುವಕ ಸಂಘದಿಂದ ಸಹಕಾರ(ಶಾಲಾ ಪ್ರಾರಂಭ ಹಂತದಲ್ಲಿ)
7. ಇಲಾಖಾ ಅಧಿಕಾರಿಗಳ ಪ್ರೋತ್ಸಾಹ
8. ಪ್ರತೀ ವಿಷಯಕ್ಕೂ ಹೆಚ್ಚಿನ ಪಾಠೋಪಕರಣಗಳ ಬಳಕೆ.
9. ಶಿಕ್ಷಕರೇ ಸಂಪನ್ಮೂಲ ವ್ಯಕ್ತಿಗಳು.
10. ನಿರುಪಯುಕ್ತ ವಸ್ತುಗಳಿಂದ ವಿವಿಧ ಮಾದರಿಗಳ ತಯಾರಿಕೆ.
11. ಪ್ರತೀ ಶಾಲಾ ಕಾರ್ಯಕ್ರಮಗಳನ್ನು ಶಿಕ್ಷಕರ ನೆರವಿವನಿಂದ ಮಕ್ಕಳೇ ನಿರ್ವಹಿಸುತ್ತಿರುವುದು.
12. ಪ್ರತಿ ದಿನ ವಿವಿಧ ಚಟುವಟಿಕಗಳ ಆಯೋಜನೆ(ಗಾದೆ, ಒಗಟು, ಮಗ್ಗಿ, ರಸಪ್ರಶ್ನೆ, ಕವನ, ವಾಕ್ಯ, ಇತ್ಯಾದಿ)
13. ಮಕ್ಕಳಿಗೆ ಶೈಕ್ಷಣಿಕ ವಸ್ತುಗಳು ಕೈಗೆಟುಕುವಂತಿರುವುದು (ಪಾಠೋಪಕರಣಗಳು)
14. ಶಿಕ್ಷಕರಿಂದ ಮಕ್ಕಳಿಗೆ ವಿಶೇಷ ಸಂಗೀತ ಹಾಗೂ ನೃತ್ಯ ತರಬೇತಿ.
15. ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಆದ್ಯತೆ.
16. ಶಾಲೆಯಿಂದ ಹೊರಗೆ ಮಕ್ಕಳು ಹಾಗೂ ಶಿಕ್ಷಕರಿಂದ ಸಾಧನೆ [ ಅರಣ್ಯ ಇಲಾಖೆ ಹಾಗೂ ಶ್ರೀಕೃಷ್ಣ ಜನ್ಮಾಷ್ಟಮಿ ಮುಂತಾದ ಕಾರ್ಯಕ್ರಮದಲ್ಲಿ ಬಹುಮಾನ ಗಳಿಕೆ]
17. ಸಹ ಪಠ್ಯ ಚಟುವಟಿಕೆಗಳ ಅನುಷ್ಠಾನ
18. ಸಮುದಾಯ ಹಾಗೂ ಮಕ್ಕಳಿಗೆ ಪರಿಸರ ಪ್ರಜ್ಞೆ ಮೂಡಿಸಲು ಜಾಗೃತಿ ಕಾರ್ಯಕ್ರಮಗಳ ಅನುಷ್ಠಾನ
19. ಮಕ್ಕಳ ಜ್ಞಾನಾಭಿವೃದ್ಧಿಗೆ ಶೈಕ್ಷಣಿಕ ಸಂಪನ್ಮೂಲಗಳ ಜೊತೆಗೆ ಪತ್ರಿಕೆ ಮ್ಯಾಗ್‌ಜಿನ್‌ಗಳ ಬಳಕೆ
20. ಮಕ್ಕಳ ಕಲಿಕೆಯನ್ನು ಉತ್ತೇಜಿಸಲು ವಿವಿಧ ಸ್ಪರ್ಧೆಗಳ ಆಯೋಜನೆ.[ ದುಂಡಾದ ಬರವಣಿಗೆ, ಚಿತ್ರ ಕಲೆ ಉಕ್ತಲೇಖನ ಇತ್ಯಾದಿ,]
21. ಪೋಷಕರಿಗಾಗಿ ಶಾಲಾ ಪರಿಸರದತ್ತ ಒಲವು ಮೂಡಿಸಲು ವಿವಿಧ ಕಾರ್ಯಕ್ರಗಳ ಆಯೋಜನೆ[ರಂಗೋಲಿ, ಚಿತ್ರಕಲೆ ಹಾಗೂ ಅನುಪಯುಕ್ತ ವಸ್ತುಗಳನ್ನು ಬಳಸಿ ಉಪಯುಕ್ತ ವಸ್ತುಗಳ ತಯಾರಿಕೆ]
22. ಕಲಿಕಾ ಏಕಾಗ್ರತೆಗೆ ಯೋಗ, ಭಜನೆ, ಧ್ಯಾನ,
23. ಮಕ್ಕಳ ಹುಟ್ಟು ಹಬ್ಬ, ಹಾಗೂ ಶಿಕ್ಷಕರ ಹುಟ್ಟು ಹಬ್ಬವನ್ನು ಶಾಲಾ ಮಕ್ಕಳೊಂದಿಗೆ ಆಚರಣೆ .
24. ಗ್ರಂಥಾಲಯದ ಸದ್ಬಳಕೆ, ನಿರ್ವಹಣೆ.
25. ಶೈಕ್ಷಣಿಕ ಚಟುವಟಿಗಳ ಅನುಕೂಲಕ್ಕಾಗಿ ಪೋಷಕರ ವಾಟ್ಸಪ್ ಗ್ರೂಪ್ ನಿರ್ವಹಣೆ.
26. ಶಾಲಾ ಗೋಡೆಗಳ ಮೇಲೆ ಕಲಿಕಾ ಮಾಹಿತಿ.
27. ಮಕ್ಕಳಿಗೆ ಸರ್ಕಾರದ ಸೌಲಭ್ಯಗಳನ್ನ ನಿಗದಿತ ವೇಳೆಯಲ್ಲಿ ಸಮಂಜಸವಾಗಿ ತಲುಪಿಸಲು ಶಿಕ್ಷಕರ ಪ್ರಾಮಾಣಿಕ ಪ್ರಯತ್ನ.
28. ಎಸ್ ಡಿ ಎಂ ಸಿ ಯವರ ಸಂಪೂರ್ಣ ಸಹಕಾರ.
29. ಮಕ್ಕಳೀಗೆ ಶುದ್ದ ಕುಡಿಯುವ ನೀರಿನ ವ್ಯವಸ್ಥೆ.

30. ಮಕ್ಕಳಿಂದಲೇ ಶಾಲೆಯ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳ ನಿರ್ವಹಣೆ.



ತೆಗೆಯಿರಿ ಪುಸ್ತಕ ಹೊರಗೆ ಯೋಜನೆಯಡಿ ಶಾಲಾ ಶಿಕ್ಷಕರಿಂದ ಸುಮಾರು ರೂ.2000/–ಗಳ ಪುಸ್ತಕಗಳನ್ನು ಶಾಲಾ ಗ್ರಂಥಾಲಯಕ್ಕೆ ನೀಡಿದ ಸಂದರ್ಭ. ಶಿಕ್ಷಣ ಸಂಯೋಜಕರಾದ ಶ್ರೀಯುತ ಮಂಜಪ್ಪ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿ ಶ್ರೀಯುತ ಗಿರೀಶ್ ರವರುಗಳ ಉಪಸ್ಥಿತಿಯಲ್ಲಿ.

ಶಾಲೆಗಾಗಿ ನಾವು ನೀವು 2012–13ನೇ ಸಾಲಿನ ಕಾರ್ಯಕ್ರಮ



ಶಾಲೆಗಾಗಿ ನಾವು ನೀವು 2012–13ನೇ ಸಾಲಿನ ಕಾರ್ಯಕ್ರಮ

## ಅಂಗವಾಗಿ ಸಸಿ ನೆಡುವ ಮೂಲಕ ಚಾಲನೆ

ಶಿವಮೊಗ್ಗ : ಶಾಲೆಗಾಗಿ ನಾವು ನೀವು 2012–13ನೇ ಸಾಲಿನ ಕಾರ್ಯಕ್ರಮ ಅಂಗವಾಗಿ ಶಿವಮೊಗ್ಗ ತಾಲ್ಲೂಕಿನ ಜ್ಯೋತಿ ನಗರದಲ್ಲಿ ಇರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವತಿಯಿಂದ ಜಾಥಾ ನಡೆಯಿತು. ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ವೆಂಕಟೇಶ್‌ರವರು ಸಸಿ ನೆಡೆಯುವ ಮೂಲಕ ಚಾಲನೆ ನೀಡಿದರು.

ಎಸ್.ಡಿ.ಎಂ.ಸಿ. ಉಪಾಧ್ಯಕ್ಷೆ ಶ್ರೀಮತಿ ಪಾರ್ವತಿ, ಸದಸ್ಯರಾದ ಸರೋಜ, ಗಾಯಿತ್ರಿ, ಶಿವಣ್ಣ, ಕುಮಾರ್, ಸುನೀತಾ, ವಿಜಯ, ಊರಿನ ಗ್ರಾಮಸ್ಥರು ಹಾಗೂ ಮುಖ್ಯ ಶಿಕ್ಷಕ ಸಿ. ಮಾರಪ್ಪ, ಸಹ ಶಿಕ್ಷಕರಾದ ಶೋಭಾ, ಸೇರಿದಂತೆ ಶಾಲಾ ಮಕ್ಕಳು ಉಪಸ್ಥಿತರಿದ್ದರು.



ಮಕ್ಕಳಲ್ಲಿ ಆಸಕ್ತಿದಾಯಕ ಕಲಿಕೆ ಹಾಗೂ ಮನನ ಮೂಡಿಸಲು ಕ್ರಿಯಾಶೀಲ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕರು.






ANTONYMS
Good Bad Accept Reject
Clean Dirty Death Alive
Angel Devil
Empty Full
ತಾಲ್ಲೂಕ
APPIE
ANT YAK
ROSE CUP
SUN CAR
MOP BOx
ಸಾಗರ
ಭದ್ರಾವತಿ




ANTONYMS
Good Bad Accept Reject
Clean Dirty Death Alive
Angel Devil
Empty Full
YELLOW
Apple
ತಾಲ್ಲೂಕ



**ಕಲಿಕೆಗೆ ಪೂರಕವಾದ ಕಲಿಕೋಪಕರಣಗಳು**



ಅರಣ್ಯ ಇಲಾಖೆ ವನ್ಯಜೀವಿ ವಿಭಾಗ ವತಿಯಿಂದ 64ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಇತ್ತೀಚೆಗೆ ಏರ್ಪಡಿಸಿದ್ದ ವಿವಿಧ ಸ್ಪರ್ಧೆಯಲ್ಲಿ ಶಿವಮೊಗ್ಗ ತಾಲೂಕು ಜ್ಯೋತಿ ನಗರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ವೈ.ಶೋಭಾ, ವಿದ್ಯಾರ್ಥಿನಿಯರಾದ ಎನ್.ಕಲ್ಯಾಣಿ, ಟಿ.ನವ್ಯ ಬಹುಮಾನ ಗಳಿಸಿದ್ದಾರೆ.

**ಮಕ್ಕಳೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕಿ.**




**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಶಿವಮೊಗ್ಗ ಇವರ ವತಿಯಿಂದ 2017–18ನೇ ಸಾಲಿನಲ್ಲಿ ಓದು ಕರ್ನಾಟಕ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ವನಮಾಲ ಹಿರಿಯ ಉಪನ್ಯಾಸಕಿ ಡಯಟ್ ಶಿವಮೊಗ್ಗ ಇವರಿಂದ ಸಾಂಸ್ಕೃತಿ ಕಾರ್ಯಕ್ರಮದ ಅಭಿನಂದನಾ ಪತ್ರ ಸ್ವೀಕರಿಸುತ್ತಿರುವ ಮುಖ್ಯ ಶಿಕ್ಷಕರಾದ ಶ್ರೀಯುತ ಮಾರಪ್ಪ.ಸಿ.**

## ಶಾಲೆಯು ಎದುರಿಸುತ್ತಿರುವ ಪ್ರಮುಖ ಸವಾಲುಗಳು

1. ಹಣದ ಕೊರತೆ
2. ಸ್ಥಳದ ಕೊರತೆ
3. ಶಾಲಾ ಕೈತೋಟ ನಿರ್ಮಿಸಲು ಸಹಕಾರದ ಕೊರತೆ.
4. ದಾಖಲಾತಿ ಹೆಚ್ಚಳಕ್ಕೆ ಹರಸಾಹಸ.
5. ಇಲಾಖೆಯ ಕಾರ್ಯಕ್ರಮಗಳ ಜೊತೆ ಗುಣಮಟ್ಟ ಶಿಕ್ಷಣ ಕಾಪಾಡಿಕೊಳ್ಳುವ ಅನಿವಾರ್ಯತೆ.
6. ಸಮುದಾಯದ ಸಹಭಾಗಿತ್ವದ ಕೊರತೆ.
7. ಇದುವರೆಗೂ ಮಾಡಿರುವ ಉತ್ತಮ ಕೆಲಸಗಳನ್ನು ಮುಂದು ವರೆಸಿಕೊಂಡು ಹೋಗುವ ಜವಾಬ್ದಾರಿ.

## ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಶಾಲೆ ಹಾಗೂ ಇಲಾಖೆ ಇಂದ ದೊರೆಯುವ ಸೌಲಭ್ಯಗಳು.

1. ವಿಶೇಷ ಭೂಧನಾ ತರಬೇತಿ ಪಡೆದ ನುರಿತ ಶಿಕ್ಷಕರಿಂದ ಭೋಧನಾ ಸೌಲಭ್ಯ.
2. 1ನೇ ತರಗತಿ ಯಿಂದ 5ನೇ ತರಗತಿವರೆಗೆ ಆಂಗ್ಲಭಾಷೆ ಕಲಿಕೆಗೆ ಉತ್ತೇಜನ.
3. ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಬ್ಯಾಗ್, ನೋಟ್ ಪುಸ್ತಕಗಳು, ಶೂ ಮತ್ತು ಸಾಕ್ಸ್
4. ವಿದ್ಯಾರ್ಥಿ ವೇತನ ಹಾಗೂ ರೇಡಿಯೋ ಪಾಠ.
5. ಉತ್ತಮ ಗುಣ ಮಟ್ಟದ ನಲಿ ಕಲಿ ಭೋದನಾ ವ್ಯವಸ್ಥೆ.
6. ಆಸನ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ.
7. ಗ್ರಂಥಾಲಯ, ವಿಜ್ಞಾನೋಪಕರಣಗಳ ಸೌಲಭ್ಯ.
8. ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ.
9. ಉಚಿತ ವೈದ್ಯಕೀಯ ಸೌಲಭ್ಯಗಳು
10. ಅಂಗವಿಕಲ ಮಕ್ಕಳಿಗೆ ಉಚಿತ ಸಲಕರಣೆಗಳ ಸೌಲಭ್ಯ ಹಾಗೂ ಕ್ರೀಡಾ ಕೂಟಗಳ ಆಯೋಜನೆ.
11. 5ನೇ ತರಗತಿ ವಿದ್ಯಾರ್ಥಿಗಳಿಗೆ ಮುರಾರ್ಜಿ ದೇಸಾಯಿ ವಸತಿ ಶಾಲೆ, ಹಾಗೂ ನವೋದಯ ವಸತಿ ಶಾಲೆಗೆ ದಾಖಲಿಸಲು ಸೂಕ್ತ ತರಬೇತಿ ಹಾಗೂ ಮರ್ಗದರ್ಶನ.
12. ಪ್ರತಿಭಾ ಕಾರಂಜಿ, ಕ್ರೀಡಾಕೂಟ, ಕಲಿಕೋತ್ಸವಗಳಲ್ಲಿ ಭಾಗವಹಿಸಲು ಮಾರ್ಗದರ್ಶನ.
13. ಇನ್ನೂ ಅನೇಕ ಇಲಾಖಾ ಸೌಲಭ್ಯಗಳು ಪ್ರೋತ್ಸಾಹ ಯೋಜನೆಗಳ ಸೌಲಭ್ಯ.